**ಅಸಲು ದಾವ ಸಂಖ್ಯೆಃ 580/2020**
**ಪಿ.ಡಬ್ಲೂ -1**

ದಿಃ 03.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಪಾಟೀ ಸವಾಲು ಶ್ರೀ ರವರಿಂದಃ-**

1. ನಾನು ಬಿ ಪಾರ್ಮಸಿ ಪದವಿಯನ್ನು ಹೊಂದಿರುತ್ತೇನೆ. ದಾವಾ ಸಿಟಿಎಸ್ ನಂಬರ 4012 ಇದು ಮೂಲತಃ ಒಂದೇ ಸರ್ವೇ ನಂಬರ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಿಟಿಎಸ್ ನಂಬರ 4012 ಹಾಗೂ 4013 ಮೂಲತಃ ಮತ್ತಿಕಳ್ಳಿ ಕುಟುಂಬಕ್ಕೆ ಸೇರಿದ ಆಸ್ತಿ ಆಗಿತ್ತು ಎಂದರೆ ಸರಿ. ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಯಾವ ರೀತಿ ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ನಾನು ನಮ್ಮ ಕುಟುಂಬಕ್ಕೆ ಸದರಿ ಸಿಟಿಎಸ್ ನಂಬರಗಳು ಹೇಗೆ ಬಂತು ಎಂದು ಖಾತ್ರಿ ಮಾಡಿಕೊಂಡಿಲ್ಲ. ಸದರಿ ಆಸ್ತಿಗಳು ನಮ್ಮ ಕುಟುಂಬಕ್ಕೆ ಹೇಗೆ ಬಂತು ಎಂಬ ಕುರಿತಾಗಿ ದಾಖಲೆಗಳನ್ನು ನೋಡಲು ನನಗೆ ಯಾವುದೇ ತೊಂದರ ಇರಲಿಲ್ಲ. ರುದ್ರಪ್ಪ ಷಣ್ಮುಖ ಮತ್ತಿಕಳ್ಳಿ ರವರು ನನ್ನ ತಂದೆಯ ತಂದೆ ಆಗಿರುತ್ತಾರೆ. ಶ್ರೀಮತಿ ಶಿವಗಂಗವ್ವಾ ನನ್ನ ತಂದೆಯ ತಾಯಿ ಆಗಿರುತ್ತಾರೆ. ಪ್ರತಿವಾದಿ ನಂಬರ ರವರ ಅಜ್ಜನ ಹೆಸರು ನನಗೆ ಗೊತ್ತಿಲ್ಲ. ನನ್ನ ಅಜ್ಜನ ಹೆಸರು ರುದ್ರಪ್ಪ ಆಗಿರುತ್ತದೆ. ರುದ್ರ ಪ್ಪ ಹಾಗೂ ಅವರ ಸಹೋದರರ ನಡುವೆ ಆದ ವಾಂಟನಿ ಪ್ರಕಾರ ಸಿಟಿ ಸರ್ವೇ ದಾಖಲೆಗಳಲ್ಲಿ ಹೆಸರುಗಳು ದಾಖಲಾಯಿತು ಎಂದರೆ ಸರಿ. ಪ್ರತಿವಾದಿ ನಂಬರ 3 ರವರಿಗೆ ಸಿಟಿಎಸ್ ನಂಬರ 4013 ಹೇಗೆ ಬಂತು ಎಂದು ನಾನು ಇಲ್ಲಿಯವರೆಗೆ ಚೌಕಾಶಿ ಮಾಡಿಲ್ಲ. ನನ್ನ ತಂದಗೆ ಸಿಟಿಎಸ್ ನಂಬರ 4012 ಯಾವ ರೀತಿಯಿಂದ ಬಂತು ಎಂದು ನಾನು ಇಲ್ಲಿಯವರೆಗೆ ಚೌಕಾಶಿ ಮಾಡಿಲ್ಲ. ಪ್ರತಿವಾದಿ ನಂಬರ 1 ರವರಿಗೆ ಆಸ್ತಿಯನ್ನು ಖರೀದಿ ನೀಡಿದ ರವೀಂದ್ರ ಮತ್ತಿಕಳ್ಳಿ ರವರಿಗೆ ಆಸ್ತಿ ಹೇಗೆ ಬಂತು ಎಂದು ನಾನು ಚೌಕಾಶಿ ಮಾಡಿಲ್ಲ. ನಮ್ಮ ಹಿರಿಯರ ನಡುವೆ ಆದ ವಾಂಟನಿ ಪ್ರಕಾರ ಜಗದೀಶ ರವರು

ತಮ್ಮ ಪಾಲಿನ ಆಸ್ತಿಯ ಕಬ್ಜಾದಲ್ಲಿ  ಇದ್ದಾರೆ ಎಂದರೆ ಸರಿ.  ಪ್ರತಿವಾದಿ ನಂಬರ 1 ರವರಿಗೆ ಖರೀದಿ ನೀಡಿರುವ ರವೀಂದ್ರ ರವರು ತಮ್ಮ ಪಾಲಿನ ಆಸ್ತಿಯ ಕಬ್ಜಾದಲ್ಲಿ ಇದ್ದರೂ ಎಂದರೆ ಸರಿ. ರವೀಂದ್ರ ರವರು ಸಿಟಿಎಸ್ ನಂಬರ 4012 ಸಿ ದ ಆಸ್ತಿಯ ಕಬ್ಜಾದಲ್ಲಿ ಇದ್ದರೂ ಎಂದರೆ ಸರಿ. ಸದರಿ ಸಿಟಿಎಸ್ ನಂಬರ 4012 ಸಿ ಮನೆ ಕೆಂಪು ಹಂಚಿನ ಮನೆಯಾಗಿತ್ತು ಎಂದರೆ ಸರಿ. ಸದರಿ ರವೀಂದ್ರ ಸಿಟಿಎಸ್ ನಂಬರ 4012 ಸಿ ದಲ್ಲಿ ವಾಸ್ತವ್ಯದಲ್ಲಿ ಇದ್ದರೂ ಎಂದರೆ  ನನಗೆ ಗೊತ್ತಿಲ್ಲ. ಸಿಟಿಎಸ್ ನಂಬರ 4012 ಸಿ ಪೂರ್ವಕ್ಕೆ ನನ್ನ ಮನೆ ಸಿಟಿಎಸ್ ನಂಬರ 4012 ಬಿ ದಲ್ಲಿ ಇರುತ್ತದೆ ಎಂದರೆ ಸರಿ. ರವೀಂದ್ರ ರವರು ವಾಸಿಸುತ್ತಿದ್ದ ಸಿಟಿಎಸ್ ನಂಬರ 4012 ಸಿ ಮೇಲ್ಛಾವಣಿ ಇದು ಪೂರ್ವ ಮತ್ತು ಪಶ್ಚಿಮದ ಗೋಡೆಯ ಮೇಲೆ ನಿಂತಿತ್ತು ಎಂದರೆ ಸರಿ. ರವೀಂದ್ರ ರವರು ವಾಸಿಸುತ್ತಿದ್ದ ಸಿಟಿಎಸ್ ನಂಬರ 4012 ಸಿ ಮನೆಯಲ್ಲಿ ಎಷ್ಟು ವರ್ಷದಿಂದ ವಾಸಿಸುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸಿಟಿಎಸ್ ನಂಬರ 4012 ಬಿ ಮನೆಯಲ್ಲಿ ನನ್ನ ಅಜ್ಜನ ಕಾಲದಿಂದಲೂ ವಾಸ್ಯವ್ಯವಾಗಿರುತ್ತೇವೆ. ನಾನು ಸಿಟಿಎಸ್ ನಂಬರ 4012 ಬಿ ಮನೆಯಲ್ಲಿ ವಾಸ್ಯವ್ಯ ಇದ್ದುದರಿಂದ ಬೇರೆ ಬೇರೆ ಸದಸ್ಯರು ಯಾವ ಯಾವ ಮನೆಯಲ್ಲಿ ವಾಸವಾಗಿದ್ದರು ಎಂಬ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ಇದೆ ಎಂದರೆ ಸರಿಯಲ್ಲ. ಜಗದೀಶ ಹಾಗೂ ರವೀಂದ್ರ ರವರ ಮನೆಗಳಿಗೆ ನಾನು ಹೋಗಿ ಬಂದು ಮಾಡುತ್ತಿದ್ದೇನೆ ಹಾಗೂ ಅವರ ಮತ್ತು ನಮ್ಮ ಸಂಬಂಧ ಚೆನ್ನಾಗಿದೆ ಎಂದರೆ ಸರಿಯಲ್ಲ. ನನ್ನ ಹಿರಿಯರ ಕಾಲದಲ್ಲಿ ಆದ ವಾಂಟನಿ ಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಅಲ್ಲವೇ ?

(ಈ ಹಂತದಲ್ಲಿ ವಾದಿ ಪರ ವಕೀಲರು ವಾಂಟನಿ ಪತ್ರದ ಕುರಿತಾಗಿ ಪ್ರತಿವಾದ ಪತ್ರದಲ್ಲಿ ಯಾವುದೇ pleading ಇಲ್ಲದೇ ಇರುವುದರಿಂದ ಹಾಗೂ ಅದರ ಕುರಿತಾಗಿ dispute ಇಲ್ಲದೇ ಇರುವುದರಿಂದ ಈ ಪ್ರಶ್ನೆಗಳನ್ನುಕೇಳಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿ ಪರ ವಕೀಲರು ಪ್ರತಿವಾದ ಪತ್ರದ ಪ್ಯಾರಾ

ನಂಬರ 3 ಮತ್ತು 5 ರಲ್ಲಿ ಪ್ರತಿವಾದಿಯು ಸ್ಪಷ್ಟ ಪ್ರತಿರಕ್ಷೆಯನ್ನು 1952 ನೇ ಇಸ್ವಿಯ ವಾಂಟನಿ ಪತ್ರದ ಕುರಿತು ಪಡೆದಿದ್ದಾರೆ ಎಂದು ಪ್ರತಿವಾದವನ್ನು ಮಂಡಿಸಿರುತ್ತಾರೆ. ಇಬ್ಬರ ಉಭಯತರರ ವಾದವನ್ನು ಆಲಿಸಲಾಯಿತು. ಕಡತಗಳನ್ನು ಪರೀಶಿಲಿಸಲಾಯಿತು. ಸದರಿ ಪ್ರಕರಣವನ್ನು ವಾದಿಯು ದಾವಾ ಆಸ್ತಿಯಲ್ಲಿ ತನಗೆ ಇರುವ ಮಾಲ್ಕಿ ಹಕ್ಕಿನ ಕುರಿತಾಗಿ ಘೋಷನ್ಮಾತಕ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಘೋಷನ್ಮಾಕ ಪರಿಹಾರವನ್ನು ಕೋರಿದ ದಾವೆಯಲ್ಲಿ ವಾದಿಯು ತನ್ನ title ಹೇಗೆ ಬಂದಿತ್ತು ಎಂಬ ಕುರಿತಾಗಿ ನಿರೂಪಣೆ ಮಾಡಬೇಕಾಗುತ್ತದೆ ಹಾಗೂ derivation of title ಅಂಶವು fact in issue ಆಗಿರುತ್ತದೆ. ಪ್ರತಿವಾದಿಯು ವಾದಿಯು ತೋರಿಸಿದ ದಾವಾ ಆಸ್ತಿಯ ಪೂರ್ವದ ಗೋಡೆಯ ಮಾಲಿಕತ್ವವನ್ನು ಒಪ್ಪಿ ಕೊಳ್ಳುವುದಿಲ್ಲ. ಕಾರಣ ದಾವಾ ಆಸ್ತಿಯ derivation of title ಕುರಿತಾಗಿ ವಾಂಟನಿ ಪತ್ರದ ವಿಚಾರವಾಗಿ ಪ್ರಶ್ನೆ ಕೇಳಲು ಪ್ರತಿವಾದಿಗೆ ಅಧಿಕಾರ ಇರುತ್ತದೆ ಎಂಬ ಅಭಿಪ್ರಾಯಕ್ಕೆ ನ್ಯಾಯಾಲಯವು ಬಂದಿರುತ್ತದೆ. ಕಾರಣ ವಾದಿಯ ಪರ ವಕೀಲರ ವಾದವನ್ನು ತಳ್ಳಿ ಹಾಕಿ ಪ್ರಶ್ನೆಯನ್ನು ಕೇಳಲು ಪ್ರತಿವಾದಿ ಪರ ವಕೀಲರಿಗೆ ಅನುಮತಿಸಲಾಯಿತು. )

ಉತ್ತರಃ ಸದರಿ ದಾಖಲೆ ನನ್ನ ಬಳಿ ಇರುವುದಿಲ್ಲ.

2. ಈ ಪ್ರಕರಣದ ಪ್ರತಿವಾದಿ ನಂಬರ 1 ಮತ್ತು 2 ರವರ ತಮ್ಮ ಪ್ರತಿವಾದ ಪತ್ರದಲ್ಲಿ ಏನು ಹೇಳಿದ್ದಾರೆ ಎಂದು ನಾನು ನೋಡಿಲ್ಲ. ಈ ಪ್ರಕರಣದಲ್ಲಿ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸುವ ಕಾಲದಲ್ಲಿ ಪ್ರತಿವಾದ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವಕೀಲರು ನೀಡಿರುತ್ತಾರೆ. ಈ ದಾವೆಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಪ್ರತಿವಾದಿ ನಂಬರ 3 ರವರು ನನ್ನ ಆಸ್ತಿ ಸಿಟಿಎಸ್ ನಂಬರ 4012 ಬಿ ಕುರಿತಾಗಿ ಯಾವುದೇ ತಕರಾರು

ಮಾಡಿಲ್ಲ ಎಂದರೆ ಸರಿ. ನಾನು ಜಗದೀಶ ರವರ ಮೇಲೆ ಈ ದಾವೆಯನ್ನು ಸಲ್ಲಿಸಿಲ್ಲ. ಈ ದಾವೆಯಲ್ಲಿ ಪ್ರತಿವಾದಿಗಳು ಯಾರು ಯಾರು ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯನ್ನು ಪ್ರತಿವಾದಿ ನಂಬರ 3 ರವರ ಪ್ರೇರಣೆ ಮೇರೆಗೆ ಪ್ರತಿವಾದಿ ನಂಬರ 1 ಮತ್ತು 2 ರವರಿಗೆ ತೊಂದರೆ ನೀಡಲು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಜಗದೀಶ ರವರ ಮೇಲೆ ಯಾವುದೇ ಮಾಂಗಣಿಯನ್ನು ಕೇಳಿಲ್ಲ. ನನ್ನ ಮನೆ ಕುರಿತಾಗಿ ಕಾರ್ಪೊರೇಶನ್ ರವರು ನನಗೆ ಯಾವುದೇ ನೋಟಿಸನ್ನು ನೀಡಿಲ್ಲ. ಪ್ರತಿವಾದಿ ನಂಬರ 1 ಮತ್ತು 2 ರವರು ಕಾರ್ಪೊರೇಶನಲ್ಲಿ ದಾವಾ ಆಸ್ತಿಯ ಕುರಿತಾಗಿ ತಕರಾರನ್ನು ನೀಡಿರುತ್ತಾರೆ. ಈ ಕುರಿತಾಗಿ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಕಾರ್ಪೊರೇಶನ್ ರವರಿಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಅವರ ಪರವಾಗಿ ಉದ್ದೇಶಪೂರ್ವಕವಾಗಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕಾರ್ಪೊರೇಶನ ರವರ ವಿರುದ್ದ ನಾನು ಯಾವುದೇ ಮಾಂಗಣಿಯನ್ನು ಕೇಳಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**